**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:17**

**ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:26**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಅಶ್ವಿನಿ |
| ಗಂಡನ **ಹೆಸರು** | : | ರಾಕೇಶ್ |
| **ವಯಸ್ಸು** | : | 32 ವರ್ಷ |
| **ವೃತ್ತಿ** | : | ಪಿಡಿಓ, ಯಡಗನಹಳ್ಳಿ ಗ್ರಾಮ ಪಂಚಾಯಿತಿ (ಮಂಡ್ಯ) |
| **ವಾಸ** | : | ಮಂಡ್ಯ |

**ದಿನಾಂಕ: 31-03-2022 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು 2018 ರಿಂದ 2020 ನವೆಂಬರ್ ವರೆಗೆ ಕಟ್‌ಬೆಳ್ತೂರು ಗ್ರಾಮ ಪಂಚಾಯಿತಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪೊಲೀಸರು ಕಟ್‌ಬೆಳ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸವಾಗಿದ್ದ ಗುಲಾಬಿ ಕೋಂ. ನಾಗೇಶ ಇವರ ಮನೆಯ ಮಾಹಿತಿ ಒದಗಿಸುವಂತೆ ಕೇಳಿದ್ದು ಪಂಚಾಯಿತಿ ದಾಖಲೆಗಳಲ್ಲಿ ಆ ಕುರಿತು ಯಾವುದೇ ಮಾಹಿತಿ ಇಲ್ಲದೇ ಇರುವುದರಿಂದ ಅವರು ಸರ್ಕಾರಿ ಜಾಗದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿದ್ದು ಪಂಚಾಯಿತಿಯಿಂದ ಪರವಾನಗಿ ಪಡೆದಿಲ್ಲ ಹಾಗೂ ಮನೆಗೆ ಪಂಚಾಯಿತಿಯಿಂದ ನಂಬರ್ ನೀಡಲಾಗಿಲ್ಲ ಎಂದು ಮಾಹಿತಿ ಕೊಟ್ಟಿರುತ್ತೇನೆ. ಈಗ ನೋಡಿದ ಮಾಹಿಯನ್ನು ನಾನು ಕೊಟ್ಟಿದ್ದು ಇದೆ. ಮಾಹಿತಿಯನ್ನು ನಿಪಿ-25 ಎಂದು ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ವೈಎಸ್ಎಸ್ ವಕೀಲರಿಂದ**

ನಾನು ಗುಲಾಬಿ ಕೋಂ. ನಾಗೇಶ ಇವರ ವಾಸವಾಗಿದ್ದ ಮನೆಗೆ ಭೇಟಿ ಕೊಟ್ಟಿರುವುದಿಲ್ಲ. ಅನಧಿಕೃತವಾಗಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣವಾಗಿದ್ದರೆ

ಅದರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಪಂಚಾಯಿತಿ ದಾಖಲೆಗಳ ಪ್ರಕಾರ ಗುಲಾಬಿ ಕೋಂ. ನಾಗೇಶ ಇವರ ವಾಸವಾಗಿದ್ದ ಮನೆಗೆ ಸಂಬಂಧಿಸಿದಂತೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**